# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 29/2023

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಸಾಧಿಕ್ | ಪ್ರಾಸಾಃ | 05 |
| **ತಂದೆಯ ಹೆಸರುಃ** | ಇಮಾನ್ ಸಾಬ್ | ಚಾಸಾಃ | 04 |
| **ವಯಸ್ಸುಃ** | 28 | ಪ್ರಮಾಣ ವಚನ ಭೋದಿಸಿದ ದಿನಾಂಕ: | 23-09-2025 |
| **ಉದ್ಯೋಗಃ** | ಕೂಲಿ | | |
| **ವಾಸ ಸ್ಥಳಃ** | ಚಿಂತಾಮಣಿ | | |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ(ಆರೋಪಿಯನ್ನು ವಿಸಿ ಮುಖಾಂತರ ಹಾಜರುಪಡಿಲಾಗಿದೆ)**

ನನಗೆ ಆರೋಪಿ ಗೊತ್ತು. ಚಾಸಾ-1 ನನ್ನ ತಂಗಿ. ಆಕೆ ವಿಕ್ರಮ್ ಕಾಲೇಜಿನಲ್ಲಿ ಬಿಕಾಂ ಓದುತ್ತಿದ್ದಳು. 2 ವರ್ಷದ ಹಿಂದೆ ಒಂದು ದಿನ ನನ್ನ ತಂಗಿ ಕಾಲೇಜಿನಿಂದ ಹಿಂದಿರುಗಲಿಲ್ಲ. 7-00 ಗೆ ಠಾಣೆಗೆ ಮಿಸ್ಸಿಂಗ್ ದೂರು ನೀಡಿದ್ದೆವು. 8-00 ಗೆ ಆಕೆ ನನ್ನ ತಮ್ಮನಿಗೆ ಪೋನ್ ಮಾಡಿ ಆರೋಪಿ ತನ್ನನು ಕರೆದುಕೊಂಡು ಹೋಗಿದ್ದಾನೆ ಮನೆಗೆ ಬರುವುದಿಲ್ಲ ಎಂದು ತಿಳಿಸಿದ್ದಳು. ಠಾಣೆಗೆ ಮಾಹಿತಿ ನೀಡಿದ್ದೆವು. 20 ದಿನದ ನಂತರ ನನ್ನ ತಂಗಿ ನನಗೆ ಪೋನ್ ಮಾಡಿ ಆರೋಪಿ ತನ್ನಲಿದ್ದ ಒಡವೆ , ಹಣ ಖರ್ಚು ಮಾಡಿಸಿ ಹಿಂಸೆ ಕೊಡುತ್ತಿದ್ದಾನೆ ಎಂದು ಮಾಹಿತಿ ನೀಡಿದ್ದಳು. ಪುನಃ 4-5 ದಿನದ ನಂತರ ಪೋನ್ ಮಾಡಿ ಧರ್ಮಸ್ಥಳದಲ್ಲಿ ಇರುವುದಾಗಿ ಹೇಳಿ ಬಸ್ ಚಾರ್ಜ್ ಗೆ ಹಣ ಕಳಿಸುವಂತೆ ಕೇಳಿದ್ದಳು. ಆಕೆ ಹೇಳಿದ್ದ ನಂ. ಗೆ ಹಣ ಕಳುಹಿಸಿದ್ದೆ. ಆಕೆ ನೀಡಿದ್ದ ಮಾಹಿತಿ

ಮೇರೆಗೆ ನಾವು ಎ*2* ಬಿ ಬಳಿ ಹೋದಾಗ ನನ್ನ ತಂಗಿ ಹೋಟೆಲ್ ಹೊರಗಡೆ ಇದ್ದಳು. ಒಳಗೆ ಆರೋಪಿ ಹಾಗೂ ಇನ್ನು *4-5* ಜನ ಇದ್ದರು. ನಮ್ಮನ್ನು ನೋಡಿ ಅವರು ಓಡಿ ಹೋದರು.

ನನ್ನ ತಂಗಿಯನ್ನು ಕರೆತಂದು ಠಾಣೆಯಲ್ಲಿ ಇರಿಸಿದೆ. ವಿಚಾರಿಸಿದಾಗ ಆರೋಪಿ ಆಕೆಯನ್ನು ಹಿಂಬಾಲಿಸುತ್ತಿದ್ದು ಆಕೆಯನ್ನು ವಿಡಿಯೋ ತೋರಿಸಿರುವುದಾಗಿ ಬೆದರಿಸಿ ತನ್ನೊಂದಿಗೆ ಕರೆದುಕೊಂಡು ಹೋಗಿ, ಚೇಳೂರು ಲಾಡ್ಜ್ ನಲ್ಲಿ *3* ದಿನ ಬಲವಂತವಾಗಿ ಅತ್ಯಾಚಾರ ಎಸಗಿ , ಹಿಂಸೆ ನೀಡಿರುವುದಾಗಿ ಮಾಹಿತಿ ನೀಡಿದ್ದಳು. ಹೇಳಿಕೆ ನೀಡಿದ್ದೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಿ.ಆರ್.ವಕೀಲರಿಂದ ಪಾಟೀ ಸವಾಲು</u>**

ಚಾಸಾ-1 ರವರನ್ನು ಠಾಣೆಗೆ ಕರೆಸಿದ್ದಾಗ ನನ್ನನು ವಿಚಾರಿಸಿದ್ದರು. ನನ್ನೊಂದಿಗೆ ತಾಯಿ ಮತ್ತು ತಮ್ಮ ಇದ್ದರು. ಅವರ ಹೇಳಿಕೆಯನ್ನು ಪಡೆದಿದ್ದರು. ಚಾಸಾ-1 ಕಾಲೇಜಿಗೆ ಬಸ್ ನಲ್ಲಿ ಹೋಗುತ್ತಿದ್ದಳು ಎಂದರೆ ಸರಿಯಲ್ಲ. ಆಟೋದಲ್ಲಿ ಹೋಗುತ್ತಿದ್ದಳು. ಈ ವಿಚಾರ ಪೋಲಿಸರಿಗೆ ಹೇಳಿಲ್ಲ. ನಾನು ಆರೋಪಿಯನ್ನು ನೋಡಿಯೇ ಇಲ್ಲ , ಪೋಲಿಸ್ ಠಾಣೆಯಲ್ಲಿ ಮಾತ್ರ ನೋಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ವಿದ್ಯಾಭ್ಯಾಸ ಹಾಗೂ ತಂದೆ ತಾಯಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಚಾಸಾ-1 ನನಗೆ ಆರೋಪಿ ತೊಂದರೆ ಕೊಡುತ್ತಿದ್ದ ವಿಚಾರ ಹೇಳಿಲ್ಲ. ಆರೋಪಿ ವಿದ್ಯಾಭ್ಯಾಸ ಮಾಡುತ್ತಿರಲಿಲ್ಲ. ಚಾಸಾ-1 ರವರಿಗೆ ಈಗ ಬೇರೆ ಮದುವೆಯಾಗಿ ಮಗು ಇದೆ. ನನ್ನ ತಂಗಿ ಪೋನ್ ಮಾಡಿದ ನಂ. ನೆನಪಿಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ , ಆರೋಪಿಗೂ ಈ ಘಟನೆಗೂ

ಸಂಬಂಧವೇ ಇಲ್ಲ ಎಂದರೆ ಸರಿಯಲ್ಲ. ನನ್ನ ತಂಗಿಯ ಸ್ನೇಹಿತರನ್ನು ವಿಚಾರಿಸಲಿಲ್ಲ. ಪ್ರಿನ್ಸಿಪಾಲರನ್ನು ವಿಚಾರಿಸಿದ್ದೆ. ನಾನು ಹೇಳಿದಂತೆ ಯಾವುದಾದರೂ ಮಿಸ್ಸಿಂಗ್ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ಕೇಸಿನ ಬಗ್ಗೆ ಮಾಹಿತಿ ಇಲ್ಲ , ಚಾಸಾ-1 ರವರು ಹೇಳಿದಷ್ಟು ಮಾತ್ರ ಗೊತ್ತು. ನನ್ನ ತಂಗಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ಚಾಸಾ-1 ರವರನ್ನು ಚೇಳೂರು ಲಾಡ್ಜ್ ಹಾಗೂ ಬೆಂಗಳೂರಿನಲ್ಲಿ ಅತ್ಯಾಚಾರ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂಗಿ ಬುದ್ಧಿವಂತಳು. ಒಳಿತು ಕೆಡುಕುಗಳ ಅರಿವು ಇದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯನ್ನು ಮುಸಲ್ಮಾನ ಜಾತಿಗೆ ಮತಾಂತರ ಮಾಡಿಸಲು ಬಲವಂತ ಮಾಡಿದ್ದು , ಆತ ಒಪ್ಪದ ಕಾರಣ ಸುಳ್ಳು ಕೇಸು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ23.09.2025 **(ಕೆ.ಎಂ.ರಾಜಶೇಖರ)**

ಸ್ಥಳಃ ಚಿಂತಾಮಣಿ

ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.